ದಿನಾಂಕ **13-11-2019** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಶ್ರೀ ಎಂ ಸಿ ಆರ್ ಜಿ ವಕೀಲರಿಂದ

ಆರೋಪಿತರು ನನಗೆ 1977 ರಿಂದ ಪರಿಚಯವಿದ್ದು ನಾನು ಅವರು ವ್ಯಾಸಂಗ ಸಮಯದಲ್ಲಿ ಸಹಪಾಟಿಗಳು ಇರುತ್ತೇವೆ. ನಾನು ವುತ್ತು ಆರೋಪಿತರು ಆತ್ಮೀಯ ಸ್ನೇಹಿತರು ಎಂದರೆ ಸರಿ. ನನ್ನ ಮತ್ತು ಆರೂಪಿತರು ಮಧ್ಯೆ ವ್ಯವಹಾರಿಕ ಸಂಬಂಧ ಕೂಡಾ ಗಟ್ಟಿಯಾಗಿ ಇತ್ತು ಎಂದರೆ ಸರಿ. ಆರೋಪಿತರು ನನ್ನ ಮನೆಗೆ ನಾನು ಅವರ ಮನೆಗೆ ಹೊಗಿ ಬರುವುದು ಇತ್ತು ಎಂದರೆ ಸರಿ. ಆರೋಪಿತರ ವ್ಯವಹಾರ ನನಗೆ ಗೊತ್ತಿತ್ತು ಎಂದರೆ ಸರಿ. ಆರೋಪಿತರ ವ್ಯವಹಾರ ಚೆನ್ನಾಗಿ ನಡೆಯುತ್ತಿತ್ತು ಎಂದರೆ ಸರಿ. ನಾನು 1996 ರಿಂದ ಜಿಂದಾಲ ಕಂಪನಿಯಲ್ಲಿ ನೌಕರಿ ಮಾಡುತ್ತಿದ್ದೇನೆಂದರೆ ಸರಿ. ನಮ್ಮ ಮನೆಯಲ್ಲಿ ನಾನು ನನ್ನ ಹೆಂಡತಿ ಮತ್ತು ಮಕ್ಕಳು ಇರುತ್ತೇವೆ. ನಮ್ಮ ಒಟ್ಟು ಕುಟುಂಬಕ್ಕೆ ನಾನೇ ಕರ್ತ ಇರುತ್ತೇನೆ. ಸಾಕ್ಷಿ ಮುಂದುವರಿದು ನನ್ನ ಸಹೋದರರು ಅವರ ಕುಟುಂಬಗಳನ್ನು ಅವರೇ ನೋಡಿಕೊಳ್ಳುತ್ತಿದ್ದಾರೆಂದು ನುಡಿಯುತ್ತಾರೆ.

ನನ್ನ ಮಗ ಎಸ್ ಎಸ್ ಎಲ್ ಸಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮಗನ ವಿದ್ಯಾಭ್ಯಾಸಕ್ಕೆ ಮಾಸಿಕ 700 ರೂಗಳ ಶುಲ್ಕ ಇರುತದೆ ಸದರಿ ಶಾಲೆಯು ಖಾಸಗೀ ಶಾಲೆ ಇರುತ್ತದೆ. ನನ್ನ ಮಾಸಿಕ ಆದಾಯ 95,000 ರೂ ಇರುತ್ತದೆ. ನನ್ನ ಸಂಬಳವು ನೇರವಾಗಿ ನನ್ನ ಬ್ಯಾಂಕ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರ ಇರುತ್ತೆನೆ. 1996 ರಿಂದ ನನಗೆ ಇರುವ ಆದಾಯದ ಬಗ್ಗೆ ನನ್ನ ವರದಿಗಳಲ್ಲಿ ತೋರಿಸಿರುತ್ತೇನೆ ಎಂದರೆ ಸರಿ.

2016 ರಲ್ಲಿ ಅಥವಾ 2017 ರಲ್ಲಿ ಆದಾಯ ತೆರಿಗೆಯ ವಿವರಗಳಲ್ಲಿ ನಾನು ಆರೂಪಿತರಿಗೆ 20 ಲಕ್ಷರ ರೂ ಕೊಟ್ಟ ಬಗ್ಗೆ ತೋರಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ನಾನು ಪಡೆಯುವ ಸಂಬಳವು ತೆರಿಗೆ ಕಡಿತವಾಗಿ ಬಂದ ಹಣವನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತರಿಗೆ ನೀಡಿದ 20 ಲಕ್ಷ ರೂ ಹಣವನ್ನು 1,000 ರೂ ಮುಖ ಬೆಲೆಯ 100 ನೋಟುಗಳ 20 ಕಟ್ಟುಗಳಲ್ಲಿ ನೀಡಿರುತ್ತೇನೆ. ಆರೋಪಿತರಿಗೆ ನೀಡಿದ ಹಣವನ್ನು ಯಾವ ಬ್ಯಾಂಕಿನ ಖಾತೆಯಿಂದ ಬಿಡಿಸಿಕೊಂಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಬೆಂಗಳೂರಿನಲ್ಲಿ ನಿವೇಶನ ಖರೀದಿಸಲು

ಪ್ರಶಾಂತ ಎಂಬುವರಿಗೆ ನೀಡಿದ ಹಣದ ಪೈಕಿ ಸದರಿ ನಿವೇಶನ ಸರ್ಕಾರದಿಂದ ಅನುಮೋದನೆಯಾಗದೇ ಇದ್ದುದರಿಂದ ಸದರಿಯವರು ನನಗೆ ನಿವೇಶನದ ಹಣವನ್ನು ಮರಳಿಸಿದ್ದು ಸದರಿ ಹಣವನ್ನು ಆರೋಪಿತರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪ್ರಶಾಂತ ರವರು 20 ಲಕ್ಷ ರೂ ಹಣವನ್ನು ಒಂದೇ ದಿನ ನೀಡಿರುತ್ತಾರೆ.

ದಿನಾಂಕ 11-09-2016 ರಂದು ಪ್ರಶಾಂತ ರವರು ನಗದಾಗಿ ಸದರಿ ಹಣವನ್ನು ನೀಡಿರುತ್ತಾರೆ. ಅದೇ ಸಮಯದಲ್ಲಿ ಆರೋಪಿತರಿಗೆ ಸದರಿ ಹಣವನ್ನು ನಾನು ನೀಡಿರುತ್ತೇನೆ. ಪ್ರಶಾಂತ ರವರು ನನಗೆ ನಿವೇಶನ ನೀಡದೇ ಇದ್ದುದರಿಂದ 20 ಲಕ್ಷ ಹಣವನ್ನು ವಾಪಸ್ಸು ನೀಡಿದ ಕುರಿತು ಮುಚ್ಚಳಿಕೆ ಬರೆದುಕೊಟ್ಟಿದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸ್ತುತ್ತೀರಾ ಎಂದರೆ ಸಾಕ್ಷಿಯು ಪ್ರಶಾಂತ ರವರು ನನಗೆ ಯಾವುದೇ ಮುಚ್ಚಳಿಕೆ ಬರೆದುಕೊಟ್ಟಿಲ್ಲ ಮತ್ತು ನಾನು ಹಣ ಪಡೆದ ಬಗ್ಗೆ ಬರೆದುಕೊಟ್ಟಿರುತ್ತೇನೆ ಎಂದು ನುಡಿಯತ್ತಾರೆ. ಪ್ರಶಾಂತ ರವರಿಗೆ ಪ್ರತೀ ತಿಂಗಳು ಹಣವನ್ನು ಬ್ಯಾಂಕ ಖಾತೆಯಿಂದ ವರ್ಗಾಯಿಸಿರುತ್ತೇನೆ. ಮೇಲ್ಕಂಡ ವಿಚಾರಗಳನ್ನು ನನ್ನ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲು ಭೋಜನ ವಿರಾಮದ ನಂತರ
ತೆಗೆದುಕೊಳ್ಳಲು ಅನಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.

ದಿನಾಂಕ **13-11-2019** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಂದುವರಿದ ಪಾಟೀ ಸವಾಲು ಶ್ರೀ ಎಂ ಸಿ ಆರ್ ಜಿ ವಕೀಲರಿಂದ

ಆರೋಪಿತರಿಗೆ ನಾನು ವಕೀಲರ ಮೂಲಕ ನೋಟೀಸನ್ನು ದೂರಿನಲ್ಲಿ ತೋರಿಸಿರುವ ವಿಳಾಸಕ್ಕೆ ಕಳುಹಿಸಿರುತ್ತೇನೆ. ಸಾಮಾನ್ಯ ಅಂಚೆ ಮೂಲಕ ನಾನು ಕಳುಹಿಸಿದ ನೋಟೀಸ ಜಾರಿಯಾಗಿದ್ದು ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ನೋಟೀಸನ್ನು ವಾಪಸ್ಸು ಕಳುಹಿಸಿರುತ್ತಾರೆ. ನಾನು ಆರೋಪಿತರಿಗೆ ಕಳುಹಿಸಿದ ನೋಟೀಸ ಜಾರಿಯಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಡಜರುಪಡಿಸಿಲ್ಲ ಎಂದರೆ ಸಾಕ್ಷಿಯು ಆರೋಪಿತರು ವಾಪಸ್ಸು ಕಳುಹಿಸಿದ ಕವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯ ಅಂಚೆಯ ಮೂಲಕ ಕಳುಹಿಸಿದ ನೋಟೀಸ ಜಾರಿಯಾಗದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರಿಗೆ ನಾನು ಸಾಮಾನ್ಯ ಅಂಚೆಯ ಮೂಲಕ ಯಾವುದೇ ನೋಟೀಸ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿತರು ತಮ್ಮ ಕಾರ್ಪೋರೇಶನ ಬ್ಯಾಂಕನ ನಿಪಿ 2 ಸೇರಿದಂತೆ ಚೆಕ್ಕ ಬುಕ್ಕು ಕಳೆದುಹೋದ ಕುರಿತು ದಿನಾಂಕ 24-09-2015 ರಂದು ಆರ ಎಂ ಸಿ ಯಾರ್ಡ ಪೋಲೀಸ್ ಠಾಣೆ ಬೆಂಗಳೂರು ರವರಲ್ಲಿ ದೂರು ನೀಡಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಆರೋಪಿತರು ತಮ್ಮ ಶ್ರೀ ಗರುಡಧ್ವಜ ಟ್ರಾನ್ಸಪೋರ್ಟ ಕಂಪನಿಯ ಲೆಟರ ಹೆಡ್ ಮೂಲಕ ದಿನಾಂಕ 05-09-2017 ರಂದು ಕಾರ್ಪೋರೇಶನ ಬ್ಯಾಂಕ ರವರಿಗೆ ತಮ್ಮ ಚೆಕ್ಕುಗಳು ಕಳುವಾಗಿರುವುದರಿಂದ ನಮ್ಮ ಖಾತೆಯನ್ನು ಮುಕ್ತಾಯಗೊಳಿಸಬೇಕಂದು ಕೋರಿ ಪತ್ರ ಸಲ್ಲಿಸಿದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ಆರೋಪಿತರ ಚೆಕ್ಕನ್ನು ನಾನು ದುರುಪಯೋಗ ಪಡಿಸಿಕೊಂಡ ಕುರಿತು ಆರೋಪಿತರು ಆರ ಎಂ ಸಿ ಯಾರ್ಡ ಪೋಲೀಸ್ ಠಾಣೆ ಬೆಂಗಳೂರು ರವರಿಗೆ ನನ್ನ ವಿರುದ್ಧ ದೂರು ದಾಖಲಿಸಿದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ದಿನಾಂಕ 09-07-2018 ರಂದು ಪೋಲೀಸರು ಆರೋಪಿತರಿಗೆ ಹಿಂಬರಹವನ್ನು ನೀಡಿದ್ದಾರೆಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣ ಕುರಿತಂತೆ 9 ನೇ ಎ ಸಿ ಎಂ ಎಂ ನ್ಯಾಯಾಲಯದಿಂದ ಖಾಸಗೀ ಪಿರ್ಯಾದು ಪ್ರಕರಣ ಸಂಖ್ಯೆ 13200-2018 ರ ಪ್ರಕರಣದಲ್ಲಿ ಸಮನ್ಸ ಜಾರಿ ಕುರಿತಂತೆ ನ್ಯಾಯಾಲಯದ ಸಿಬ್ಬಂದಿಯವರು ಮತ್ತು ಪೋಲೀಸರ ಮೂಲಕ ದೂರವಾಣಿ ಕರೆ ಬಂದಿತ್ತು ಎಂದರೆ ಸರಿಯಲ್ಲ.

ನಾನು ಮತ್ತು ನನ್ನ ಸ್ನೇಹಿತರು ಸೇರಿಕೊಂಡು ಆರೋಪಿತರ ಸ್ನೇಹವನ್ನು ದುರುಪಯೋಗ ಪಡಿಸಿಕೊಂಡು ಅವರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆಂದರೆ ಸರಿಯಲ್ಲ. ನನಗೆ 20 ಲಕ್ಷ ರೂಗಳನ್ನು ಸಾಲವಾಗಿ ಕೊಡುವಷ್ಟು ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ನಾನು ದುರ್ಲಾಭ ಪಡೆಯುವ ಸಲುವಾಗಿ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಅವರಿಗೆ ತೊಂದರೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ತೋರಣಗಲ್ಲಿನ ಬ್ಯಾಂಕ ಖಾತೆಯನ್ನು ಹೊರತುಪಡಿಸಿ ನನಗೆ ಮದ್ದೂರು ಶಾಖೆಯ ಬ್ಯಾಂಕನಲ್ಲಿ ಖಾತೆ ಇರುತ್ತದೆ. ಆರೋಪಿತರು ನಾನು ದೂರಿನಲ್ಲಿ ತೋರಿಸಿರುವ ವಿಳಾಸದಲ್ಲಿ ವಾಸ ಇಲ್ಲದೇ ಇದ್ದರೂ ಅವರ ವಿರುದ್ಧ ನೋಟೀಸ್ ಜಾರಿಯಾಗದೇ ಇದ್ದರೂ ಸುಳ್ಳು ಪ್ರಕರಣ ದಾಖಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರಿಂದ ನನಗೆ ಕಾನೂನು ಬದ್ದವಾಗಿ ಬರಬೇಕಾದ ಯಾವುದೇ ಹಣ ಇಲ್ಲ ಎಂದರೆ ಸರಿಯಲ್ಲ. ನಾನು ಅನಧೀಕೃತವಾಗಿ ಲೇವಾದೇವಿ ವ್ಯವಹಾರ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾದಂ., ಸಂಡೂರು.